# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5050/2024 ಫ್ರಾಸಾ-2
ಚಾಸಾ-1

ದಿನಾಂಕಃ 15-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ತಿಪ್ಪೆಸ್ವಾಮಿ |
| **ತಂದೆಯ / ಗಂಡನ ಹೆಸರು** | ಯರ್ರಯ್ಯಪ್ಪ |
| **ವಯಸ್ಸು** | 45 |
| **ಉದ್ಯೋಗ** | ಗಾರೆ ಕೆಲಸ |
| **ವಾಸಸ್ಥಳ** | ಕೆ. ರಾಂಪುರ, ಪಾವಗಡ ತಾಲ್ಲೂಕು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಆರೋಪಿ ನನನ ಚಿಕ್ಕಪ್ಪನ ಮಗ. ಮೃತೆ ಆದಿಲಕ್ಷ್ಮಮ್ಮ ಆರೋಪಿ ರಮೇಶನ ಹೆಂಡತಿ. ಆದಿಲಕ್ಷ್ಮಮ್ಮ ಮತ್ತು ಆರೋಪಿಗೆ ಇಬ್ಬರು ಮಕ್ಕಳು ಅವರುಗಳು ಚಾಸಾ-6 ಮತ್ತು ಚಾಸಾ-7. ಆದಿಲಕ್ಷ್ಮಮ್ಮ ಜೀವಂತ ಇರುವುದಿಲ್ಲ. ಆಕೆ ಒಂದು ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನಾನು ಆದಿಲಕ್ಷ್ಮಮ್ಮನ ಶವ ನೋಡಿರುವುದಿಲ್ಲ ಆಕೆಯ ಶವ ಸಂಸ್ಕಾರಕ್ಕೆ ನಾನು ಹೋಗಿರುವುದಿಲ್ಲ. ಆದಿಲಕ್ಷ್ಮಮ್ಮ ರವರ ಮನೆ ಮತ್ತು ನಮ್ಮ ಮನೆಯ ಮದ್ಯೆ 3 ಮನೆಗಳು ಇರುತ್ತವೆ. ಆರೋಪಿ ಮತ್ತು ಮೃತ ಆದಿಲಕ್ಷ್ಮಮ್ಮ ಗಲಾಟೆ ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಾಯಿತು. ಆದಿಲಕ್ಷ್ಮಮ್ಮ ಹೇಗೆ ತೀರಿಕೊಂಡಿರುತ್ತಾರೆ , ಯಾವ ಕಾರಣದಿಂದ ತೀರಿಕೊಂಡಿರುತ್ತಾರೆ ಅವಳ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ.

ನ್ಯಾಯಾಲಯದಲ್ಲಿರುವ ದಾಖಲೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ದೂರನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಒಂದು

ವರ್ಷ ಹಿಂದೆ ಸಹಿ ಮಾಡಿರುತ್ತೇನೆ. ನಿಪಿ-2 ಕ್ಕೆ ಪೊಲೀಸರು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ಪೊಲೀಸರು ಠಾಣೆಗೆ ಬಾ ಎಂದು ಹೇಳಿದ್ದರಿಂದ ಠಾಣೆಗೆ ಹೋಗಿರುತ್ತೇನೆ. ನಿಪಿ-2 ರಲ್ಲಿ ಬರೆದ ವಿಯಷ ನನಗೆ ಗೊತ್ತಿಲ್ಲ.

ನ್ಯಾಯಾಲಯದಲ್ಲಿರುವ ದಾಖಲೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಮಹಜರನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನಿಪಿ-3 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಏನನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ-3 ರಲ್ಲಿರುವ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಗೆ ಎರಡು ಪೊಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ, ಸದರಿ ಪೊಟೋಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು. ಸದರಿ ಪೊಟೋಗಳನ್ನು ಪೊಲೀಸರು ಮಾರನೇ ದಿನ ನಮ್ಮ ಮನೆ ಹತ್ತಿರ ಬಂದಾಗ ತೆಗೆಸಿಕೊಂಡಿರುತ್ತಾರೆ. ಪೊಲೀಸರು ಹೇಳಿದ ಮೇರೆಗೆ ನಾನು ಪೊಟೋದಲ್ಲಿ ಕಾಣಿಸಿಕೊಂಡು ಕೈ ತೋರಿಸಿರುತ್ತೇನೆ. ಸದರಿ ನಿಪಿ-4 ರ ಪೊಟೋ ರಮೇಶ ರವರ ಮನೆ ಇರುತ್ತದೆ. ನಿಪಿ-5 ರಲ್ಲಿ ಕಾಣಿಸುತ್ತಿರುವ ಜಾಗ ರಮೇಶ್ ರವರ ಮನೆ ಮುಂಭಾಗ ಇರುತ್ತದೆ. ಈ ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿರುವುದಿಲ್ಲ. ಆರೋಪಿ ಏಕೆ ಜೈಲಿನಲ್ಲಿರುತ್ತಾನೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ.12.08.2024 ರಂದು ಮದ್ಯಾಹ್ನ 12-00 ಗಂಟೆಗೆ ನಾನು ನಮ್ಮ ಮನೆಯ ಹತ್ತಿರ ಇರುವಾಗ ಚಾಸಾ-2 ರವರು ಜೋರಾಗಿ ಕಿರುಚಿದಾಗ ನಾನು ಮನೆ ಹತ್ತಿರ ಹೋಗಿ

ನೋಡಲಾಗಿ ಆದಿಲಕ್ಷ್ಮಮ್ಮ ನೆಲದ ಮೇಲೆ ಅವರ ಮನೆಯಲ್ಲಿ ರಕ್ತದ ಮಡುವಿನಲ್ಲಿ ಹೊರಳಾಡುತ್ತಿದ್ದಳು ಆಗ ನಾನು ಗಂಗಮ್ಮಳಿಗೆ ಕೇಳಿದಾಗ ಅವಳು ಆರೋಪಿ ಪ್ರತಿ ದಿನ ಕುಡಿದು ಬಂದು ಹೆಂಡತಿ ಮತ್ತು ಮಕ್ಕಳ ಮೇಲೆ ಕುಡಿಯಲು ಹಣ ಕೊಡು ಎಂದು ಗಲಾಟೆ ಮಾಡುತ್ತಿದ್ದ , ಮದ್ಯ ಕುಡಿಯಲು ಹಣ ಕೊಡದೇ ಇದ್ದಾಗ ಆದಿಲಕ್ಷ್ಮಮ್ಮನಿಗೆ ಚಿಕ್ಕ ಒಣಕೆಯಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾನೆ ಎಂದು ಹೇಳಿದಳು ಎಂದರೆ ಸರಿಯಲ್ಲ. ಆಗ ಯಾರೋ ಆಂಬುಲೆಯನ್ಸ್ ಗೆ ಫೋನ್ ಮಾಡಿ ಆಂಬುಲೆಯನ್ಸ್ ಬಂದ ನಂತರ ಗಾಯಾಳು ಆದಿಲಕ್ಷ್ಮಮ್ಮಳನ್ನು ನಾನು ಮತ್ತು ನನ್ನ ಮಗ ಸತೀಶ್ ಚಾಸಾ-3 ಇಬ್ಬರು ಸೇರಿ ಆಂಬುಲೆಯನ್ಸ್ ನಲ್ಲಿ ಪಾವಗಡ ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಆದಿಲಕ್ಷ್ಮಮ್ಮ ಮಗಳಿಗೆ ವಿಷಯ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-8 ಮತ್ತು 9 ರವರು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ನಿಜ. ಪೆದ್ದಣ್ಣ ನನಗೆ ರಾತ್ರಿ 9-00 ಗಂಟೆಗೆ ಫೋನ್ ಮಾಡಿ 7-51 ನಿಮಿಷಕ್ಕೆ ನಿಮಾನ್ಸ್ ಆಸ್ಪತ್ರೆಯಲ್ಲಿ ಆದಿಲಕ್ಷ್ಮಮ್ಮ ತೀರಿಕೊಂಡಳು ಎಂದು ವಿಷಯ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ.ನಂತರ ನಾನೇ ಸ್ವತಃ ಹೋಗಿ ನಿಪಿ-2 ರಂತೆ ಆರೋಪಿ ವಿರುದ್ದ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ವಿಷಯ ನನಗೆ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ.13.08.2024 ರಂದು ಮದ್ಯಾಹ್ನ 1-00 ರಿಂದ 2-00 ಗಂಟೆಯವರೆಗೆ ಪೊಲೀಸರು ಮೃತ ಆದಿಲಕ್ಷ್ಮಮ್ಮ ರವರ ಮನೆ ಹತ್ತಿರ ಬಂದು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಮತ್ತು ಪಂಚರಿಗೆ ನಾನೇ ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಟಿ.ವಿ ಮುಂದೆ ರಕ್ತ ಕಲೆಯಾಗಿರುವ ಒಂದು ಹಳದಿ ಬಣ್ಣದ ಟೀ ಶರ್ಟ್ ಬಿದಿದ್ದು ಮತ್ತು ರಕ್ತದ ಕಲೆ ಆಗಿರುವ ಪಿಂಕ್ ಕಲರ್ ಒಳರಂಗ ಇದ್ದು ಅವುಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ರಕ್ತದ ಕಲೆಯನ್ನು ಹತ್ತಿಯಿಂದ ಸಂಗ್ರಹಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮನೆಯ ಮುಂದೆ ಎರಡು ಕಟ್ಟೆ ಇದ್ದು ಪಶ್ಚಿಮದ ಕಡೆಯ ಕಟ್ಟೆಯ ಮೇಲಿದ್ದ ಒಂದು ಒಣಗೆಯನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ರಂತೆ ನನ್ನ ಸಮಕ್ಷಮ ಮಹಜರ್

ಮಾಡಿದ ವಿಚಾರ ನನಗೆ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಾನು ತೋರಿಸಿದ ಮೇರೆಗೆ ಫೋಟೋಗಳನ್ನು ನಿಪಿ-4 ಮತ್ತು ನಿಪಿ-5 ರಂತೆ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ದಿ. 13.08.2024 ರಂದು ನಾನು ಪಂಚನಾಮೆ ಕಾಲಕ್ಕೆ ಹಾಜರಿದ್ದು ಪೊಲೀಸರಿಗೆ ಸ್ಥಳ ತೋರಿಸಿರುತ್ತೇನೆಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆದಿಲಕ್ಷ್ಮಮ್ಮ ನ ಸಾವಿಗೆ ಆರೋಪಿಯೇ ಕಾರಣವಾಗಿದ್ದರೂ ಆರೋಪಿಯನ್ನು ಬಿಡುಗಡೆ ಮಾಡಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ. ಬಿ.ಬಿ.ಎಂ. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**